Seshadripuram Educational Trust

# Vani

## The Voice of Excellence

ಶೈಕ್ಷಣಿಕ, ಸಾಂಸ್ಕೃತಿಕ, ತ್ರೈಮಾಸಿಕ ಪತ್ರಿಕೆ

Volume - 29

Edition - 3

January - 2017

ಶೇಷಾದ್ರಿಪುರಂ ಶಿಕ್ಷಣ ದತ್ತಿ

ಶೇಷಾದ್ರಿಪುರಂ, ಬೆಂಗಳೂರು-560020


Visit of Dr. Sam Beldona, Dominican University of California, U.S.A. 8



ಸ್ನೇಹ-ಸಮ್ಮಿಲನ 2016 3


25ನೇ ವರ್ಷದ ನಾಟಕ ಮತ್ತು ಸಮೂಹ ಗಾಯನ ಸ್ಪರ್ಧೆ 5


Taster Programme at Grimsby Institute, U.K. 8



ಕನ್ನಡವೆನೆ ಕುಣಿದಾಡುವುದೆನ್ನದೆ 10-11



Childen's Day Special 6-7,12


Jnanapeetha Awardee Dr. Chandrashekar Kambara at S.F.G.C., Yelahanka 6

**For Internal Circulation only**

Book-Post

To,

If undelivered, please return it to:
Editor, 'Vani' Quaterly Newsletter
Seshadripuram Educational Trust,
No.27, Nagappa Street,
Seshadripuram, Bengaluru - 560020

**Managing Editor**
N.R. Panditharadhya

**Chief Editor**
Dr. Wooday P. Krishna

**Creative Advisor**
Nalini Harish

**Editors**
Tejaswini P.
Dr. Kavayashree H.
Shantamma

**Editorial Board**
S. Sesha Narayana
W.G. Ramakrishna
B.S. Lokanath
P.C. Narayana
Saroja K.M. Nanjappa
Dr. M. Prakash
Dr. Anuradha Roy
Prof. A.G. Asha
Prof. Chandrika Puranik
Dr. S.N. Venkatesh
Prof. Jayram
Dr. R. Manjunath
Prof. Nagaraje Urs K.
Prof. N. Santosh Kumar
Dr. M.R. Bhavani
Dr. Bhargavi V.R.
Dr. G. Vatsala
Prof. Sowmya Irappa
Prof. P. Narayana Swamy
Prof. G.K. Manjunath
Prof. R. Mahalakshmi
Dr. R.D. Satish
Prof. T. Doddegowda
Venkateshaiah M.B.
Geetha M.
Netramani
K. Kavita
Mary Thomas
Sirisha Malvia

# Editorial

As we put together another issue of Vani with commemorative articles I can't help but trace a connection between them all. Another year is coming to an end and a new one is on the brink. As I look at the article on the Mahatma I feel that atleast in the days to come we owe it to ourselves and our future-the children to create a world of peace and harmony. I know it is a tall order but we can always make a beginning after all, even small things can make a big difference. We can start by finding peace within ourselves which can then be reflected in our outward interactions whether at home, in our neighbourhoods, schools or places of work. We must simply be the change we want to see in the world and the rest shall follow.

Another simple aspect that is deeply connected with peace and calm is cleanliness-again something the Father of our Nation advocated. Maintaining cleanliness in our environs, disposing the unwanted and clearing the clutter is akin to shedding an emotional burden. A cluttered mind equals cluttered surroundings and vice versa.

Similarly, the articles on Rajyotsava only stress the need to keep in touch with our mother tongue. Language is the vehicle of any culture and without culture, we are rootless, with no strong identity. In an increasingly shrinking world, it is great that we may converge with so many different cultures and languages but let us not forget ours in the bargain. In this case too, simple things can make a big difference. Remember that language is alive only as long as it is used. Culture too should be a living thing, constantly evolving with application; both may exist only when passed to the future generation.

Keeping these things in mind, let us step into another year and make a newer, brighter beginning.

**- Editor**

*Wishing all the stake holders of S.E.T. a happy and prosperous new year 2017*

Dr. Wooday P. Krishna
Hon. Gen. Secretary

N.R. Panditharadhya
President

Vani Team

For suggestions & feedback mail us at : editorialvani@gmail.com

## Mission Statement

**BELIEF**
Seshadripuram Education Trust believes that every individual needs affordable, relevant and quality education to fulfill personal aspirations.

**VISION**
To constantly strive towards meeting this social need by inclusion and expansion of new streams of education in its institutions and provide world class infrastructure for learning, research and application of knowledge.

**MISSION**
To excel in all its activities in order to create an atmosphere of effective learning, generate a sprit of enquiry, induce healthy challenges and competitions, encourage sustainable accomplishments and ensure enriching rewards to everyone - students, teachers, trustees, associates and society at large.

**GOAL**
To emerge as a global conglomerate of premier academic institutions, each taking pride in having nurtured knowledge that will lead to happiness, peace, harmony and prosperity.

ಪತ್ರಿಕಾ ವರದಿ


ದೇಶಪ್ರೇಮದ ಸೆಲೆ, ಸಂದೇಶದ ನೆಲೆ...


ಸ್ನೇಹ ಸಮ್ಮಿಲನ–ನಿವೃತ್ತ ಶಿಕ್ಷಕರಿಗೆ ಸನ್ಮಾನ

ಕೃಪೆ: ಪ್ರಜಾವಾಣಿ

ಶೇಷಾದ್ರಿಪುರಂ ಶಿಕ್ಷಣ ದತ್ತಿ
ಶೇಷಾದ್ರಿಪುರಂ, ಬೆಂಗಳೂರು

# ಸ್ನೇಹ-ಸಮ್ಮಿಲನ 2016




**1500ಕ್ಕೂ ಹೆಚ್ಚು ಬೋಧಕರು, ಹಾಗೂ ಬೋಧಕೇತರ ಸಿಬ್ಬಂದಿ ಭಾಗವಹಿಸಿದ್ದ ಸಮಾರಂಭ ಮುದ ನೀಡಿತು. ಕಾರ್ಯಕ್ರಮದ ಆರಂಭದಲ್ಲಿ ಸಂಗೀತಾ ಕಟ್ಟಿ ಅವರಿಂದ ಸುಶ್ರಾವ್ಯ ಗಾಯನ ಸುಧೆ ಸಭಿಕರನ್ನು ರಂಜಿಸಿತು.**

ಸಮಾಜದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ 'ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಯಲಹಂಕದಲ್ಲಿರುವ ಶೇಷಾದ್ರಿಪುರಂ ಪ್ರಥಮದರ್ಜೆ ಕಾಲೇಜಿನಲ್ಲಿ 10.12.2016ರಂದು ಪ್ರತಿ ವರ್ಷದಂತೆ 'ಸ್ನೇಹ-ಸಮ್ಮಿಲನ' ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಸ್ಟೀಸ್ ಡಾ. ಎನ್. ಕುಮಾರ್ ವಹಿಸಿದ್ದರು.

ಶೇಷಾದ್ರಿಪುರಂ ಅಂಗಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಹಿರಿಯರನ್ನು ಈ ಸಮಾರಂಭದಲ್ಲಿ ಸೇವಾ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.



ಕಾರ್ಯಕ್ರಮದ ಆರಂಭದಲ್ಲಿ ಸಂಗೀತಾ ಕಟ್ಟಿ ಅವರಿಂದ ಸುಶ್ರಾವ್ಯ ಗಾಯನ ಸುಧೆ ನಡೆಯಿತು. ಇವರು ತಮ್ಮ ಗಾಯನದಲ್ಲಿ ಸಭಿಕರನ್ನು ಭಾಗವಹಿಸುವಂತೆ ತೊಡಗಿಸಿಕೊಂಡು ಸಭಿಕರನ್ನು ರಂಜಿಸಿದ್ದು ವಿಶೇಷವಾಗಿತ್ತು. ಶೇಷಾದ್ರಿಪುರಂ ವಿದ್ಯಾ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ. ವೂಡೇ ಪಿ. ಕೃಷ್ಣರವರು 'ನಾಡು-ನುಡಿ ರಕ್ಷಣೆ ಪ್ರತಿಯೊಬ್ಬರ ಹೊಣೆ' ಎಂದು ತಿಳಿಸಿ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಸ್ಟೀಸ್ ಡಾ. ಎನ್. ಕುಮಾರ್ (ನಿವೃತ್ತ ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ)ರವರನ್ನು ಸ್ವಾಗತಿಸಿದರು. ಮುಖ್ಯ ಅತಿಥಿ ಕುಮಾರ್‌ರವರನ್ನು ಸಭೆಗೆ ಪರಿಚಯ ಮಾಡಿಕೊಟ್ಟರು.

ಡಾ. ಎನ್. ಕುಮಾರ್‌ರವರು 'ಇಂಟರ್ ನ್ಯಾಷನಲ್ ಸೆಂಟರ್ ಫಾರ್ ಆಲ್ಟರ್ನೇಟಿವ್ ಡಿಸ್‌ಪ್ಯೂಟ್ ರೆಸ್ಯೊಲೂಷನ್' ಎಂಬ ಸಂಸ್ಥೆಯ ಬೆಂಗಳೂರು ಶಾಖೆಯ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ.

ಶೇಷಾದ್ರಿಪುರಂ ಕಾಲೇಜಿನ ಸಂಶೋಧನಾ ಪತ್ರಿಕೆಯಾದ "ಅನ್ವೇಷಣಾ" ಮೊದಲ ಸಂಚಿಕೆ ಅನಾವರಣವನ್ನು ನೆರವೇರಿಸಿ, 'ಸೇವಾ ಪ್ರಶಸ್ತಿ ಪ್ರದಾನ' ಮಾಡಿ ತನ್ನ ಅಂಗ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಹಿರಿಯರನ್ನು ಹೀಗೆ ಪ್ರತಿವರ್ಷವೂ ಗೌರವಿಸಿ ಎಂದು ಹೇಳಿದರು.



ಅನೇಕ ಶಿಕ್ಷಣ ಸಂಸ್ಥೆಗಳು ವ್ಯಾಪಾರಕ್ಕಿಳಿಯುತ್ತಿವೆ. ಅನೇಕ ವಿದ್ಯಾ ಸಂಸ್ಥೆ ಕಟ್ಟಡಗಳು ಮೊಸಾಯಿಕ್‌ಗಳಿಂದ ಹೊಳೆಯುತ್ತಿವೆಯೇ ಹೊರತು ಒಳಗಿನ ಸತ್ವ ಟೊಳ್ಳಾಗುತ್ತಿದೆ. ಕನ್ನಡ ಭಾಷಾಭಿಮಾನ ಕಡಿಮೆಯಾಗುತ್ತಿರುವ ಕರ್ನಾಟಕದಲ್ಲಿ ಕನ್ನಡವೇ ಶಿಕ್ಷಣದ ಪ್ರಧಾನ ಮಾಧ್ಯಮವಾಗಿ ಬೆಳೆಯುವಂತಾಗಬೇಕು. ಈ ಸಂಸ್ಥೆಯಲ್ಲಿ ಕನ್ನಡ ಹಾಗೂ ಇಂಗ್ಲಿಷ್ ಎರಡೂ ಭಾಷೆಯಲ್ಲಿ ಮಕ್ಕಳಿಗೆ ಕಲಿಸುತ್ತಿರುವುದು ಸಂತೋಷದಾಯಕ ಎಂದರು.

ಶಿಕ್ಷಕರ ಜವಾಬ್ದಾರಿಗಳಿಗೆ ಒತ್ತು ನೀಡಿ ಮಾತನ್ನಾಡಿದ ಜಸ್ಟೀಸ್‌ರವರು ಮಕ್ಕಳಿಗೆ ಬೋಧಿಸುವುದರೊಂದಿಗೆ ಒಂದು ಸಮಾಜವನ್ನು ತಿದ್ದಿ, ರೂಪಿಸುವ ಹೊಣೆ ಉಳಿದವರಿಗಿಂತ ಹೆಚ್ಚಾಗಿ ಶಿಕ್ಷಕರದ್ದಾಗಿದೆ. ಮಕ್ಕಳು ಶಿಕ್ಷಕರನ್ನು ಅನುಕರಿಸುವುದು ಹೆಚ್ಚು. ಆದ್ದರಿಂದ ತರಗತಿ ಹಾಗೂ ಹೊರಗೆ ಶಿಕ್ಷಕರು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು.

ಶೇಷಾದ್ರಿಪುರಂ ವಿದ್ಯಾ ಸಂಸ್ಥೆಯಲ್ಲಿ ಹೆಚ್ಚಾಗಿ ಮಹಿಳಾ ಉದ್ಯೋಗಿಗಳಿದ್ದು, ಇವರ ಕಾರ್ಯವೈಖರಿ, ವೃತ್ತಿನಿಷ್ಠೆಯನ್ನು ಶ್ಲಾಘಿಸಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಎಲ್ಲ ಧರ್ಮದರ್ಶಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

# ಅಭಿನಂದನೆಗಳು

ಕೆಂಗೇರಿಯಲ್ಲಿರುವ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ವಿವಿಧ ಕ್ರೀಡೆಗಳಲ್ಲಿ ಸಾಧನೆ ಮಾಡಿದ್ದಾರೆ. ಅವರೆಲ್ಲರನ್ನೂ ವಾಣಿ ತಂಡ ಅಭಿನಂದಿಸುತ್ತದೆ.



**ಕು. ಮೈತ್ರಿ ಸಿ. ಸಿ.**

ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯಾದ ಇವರು 'ಪದವಿ ಪೂರ್ವ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ ವಿದ್ಯಾರ್ಥಿಗಳ ಬೆಂಗಳೂರು ದಕ್ಷಿಣ ಜಿಲ್ಲಾಮಟ್ಟದ ಕ್ರೀಡಾಕೂಟ 2016-17' ರಲ್ಲಿ ಭಾಗವಹಿಸಿ **200ಮೀ ಮತ್ತು 800 ಮೀ** ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಹಾಗೂ **400 ಮೀ ಓಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು** ಪಡೆದಿದ್ದಾರೆ.



**ಮಾ. ಕಾರ್ತಿಕ್ ಗೌಡ**

ದ್ವಿತೀಯ ಪಿಯುಸಿ ವಿದ್ಯಾರ್ಥಿಯಾದ ಇವರು 'ಪದವಿ ಪೂರ್ವ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ ವಿದ್ಯಾರ್ಥಿಗಳ ಬೆಂಗಳೂರು ದಕ್ಷಿಣ ಜಿಲ್ಲಾ ಮಟ್ಟದ ಕ್ರೀಡಾ ಕೂಟ 2016-17'ರಲ್ಲಿ, **400 ಮೀ ಓಟದ (ಹರ್ಡಲ್ಸ್) ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು** ಹಾಗೂ **110 ಮೀ ಓಟದ (ಹರ್ಡಲ್ಸ್) ಸ್ಪರ್ಧೆಯಲ್ಲಿ ತೃತೀಯ ಸ್ಥಾನವನ್ನು** ಪಡೆದಿದ್ದಾರೆ.

**ಮಾ. ಮನೀತ್ ಎಂ. ಬಿ.**

ಇವರು 'ಪದವಿ ಪೂರ್ವ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ ವಿದ್ಯಾರ್ಥಿಗಳ ಬೆಂಗಳೂರು ದಕ್ಷಿಣ ಜಿಲ್ಲಾ ಮಟ್ಟದ ಕ್ರೀಡಾ ಕೂಟ 2016-17'ರಲ್ಲಿ, **ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ** ಪಡೆದಿದ್ದಾರೆ.



**ಮಾ. ಪುನೀತ್ ಎಂ.ಬಿ.**

ಪ್ರಥಮ ಪಿಯುಸಿ ವಿದ್ಯಾರ್ಥಿಯಾದ ಇವರು 'ಪದವಿ ಪೂರ್ವ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ ವಿದ್ಯಾರ್ಥಿಗಳ ಬೆಂಗಳೂರು ದಕ್ಷಿಣ ಜಿಲ್ಲಾಮಟ್ಟದ ಕ್ರೀಡಾಕೂಟ 2016-17' ರಲ್ಲಿ **110 ಮೀ ಓಟದ (ಹರ್ಡಲ್ಸ್) ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು** ಪಡೆದಿದ್ದಾರೆ.



"ಕನ್ನಡಿಗರು ಒಕ್ಕಟ್ಟಾಗಿರಲು ಇರುವ ಏಕಮಾತ್ರ ಸಾಧನ ಅವರ ನುಡಿ, ಸಾವಿರಾರು ವರ್ಷವಾಗಿ ಕಲ್ಪವೃಕ್ಷದಂತೆ ಬೆಳೆದು ಸಕಲ ಇಷ್ಟಾರ್ಥಗಳನ್ನು ಕೊಡಬಲ್ಲ ಅವರ ನುಡಿ" - ಎ.ಆರ್. ಕೃಷ್ಣಶಾಸ್ತ್ರಿ

# Events

## Seshadripuram College
Seshadripuram, Bengaluru

### One-Day National Seminar on, 'Sports and Health'



On 23rd Sept. 2016, Seshadripuram College, Department of Physical Education & Sports conducted a One-day National Seminar on, 'Sports and Health' for the first time in the college. The chief guest on this occasion was Padmabhushan Dr. B. M. Hegde Former Vice-Chancellor of Manipal University and Arjun Devaiah, International Athlete.

## Seshadripuram Law College
Seshadripuram, Bengaluru

### Guest Lecture



On 19 Oct. 2016, Seshadripuram Law College, Seshadripuram had organised a guest lecture on, 'Procedure in Complaint'. The resource person on this occasion was Mr. Prashanth N., Circle Inspector, C.I.D.

### Celebration of Law Day



On 26 Nov. 2016, Seshadripuram Law College, Seshadripuram celebrated-'Law Day' by organising a guest lecture on the occasion. The resource person was Sri R. Yateesh Kumar, Advocate, Honourable High Court of Karnataka, Bengaluru.

## Seshadripuram Higher Primary and High School
Yelahanka, Bengaluru

### Inter-Class Sports Meet




On 27 Oct. 2016, Seshadripuram Higher Primary and High School, Yelahanka organised Inter-Class Sports Meet for classes I to X Std. The chief guest on this occasion was Sri Chethan S., International Hockey Player.

### 'Food Carnival 2016'



On 12 Nov. 2016, Seshadripuram Higher Primary and High School, Yelahanka had jointly organised- 'Food Carnival 2016' to commemorate Children's day.

## Seshadripuram Independent Pre-University College
Kengeri, Bengaluru

### Annual Sports Meet



On 19 Nov. 2016, Seshadripram Independent P.U. College, Kengeri held its - 'Annual Sports Meet 2016-17'. The chief guest for the occasion was Sri Satheesh Mathew, Senior Athletic Coach, Sports Authority of India, Bengaluru.

## Seshadripuram Postgraduate Dept. of Commerce and Management
Yelahanka, Bengaluru

### One-Day National Conference




On 19 Oct. 2016, Seshadripuram Postgraduate Department of Commerce and Management, Yelahanka had organised a One-day National Conference on, 'The Indian Banking Industry'. Eminent personalities from the sector were invited to hold panel discussions and make presentations on topics such as-Agricultural Financing, Non-Performing Assets, Rural Banking, Credit Rating and the Future of Indian Banking.

"There can be no keener revelation of a society's soul than the way in which it treats its children." — Nelson Mandela

# Events

## Seshadripuram Independent Pre-University College

Kengeri, Bengaluru

### 'Career Guidance and Motivation' session



On 26 Nov. 2016, Seshadripuram Independent P.U. College, Kengeri had organised a, 'Career Guidance and Motivation' session followed by the school dance competition. The chief guest and speaker on this occasion was Dr. Gururaj Karajagi, Chairman and Managing Director, Academy for Creative Teaching.

### Talk on 'Building Confidence'



On 7 Dec. 2016, Seshadripuram Independent P. U. College, Kengeri had organised a talk on,'Building Confidence'.The resource person on this occasion was Dr. ShailajaShashtri, Head, Department of Psychology, Jain University.

## ಶೇಷಾದ್ರಿಪುರಂ ಪ್ರೌಢಶಾಲೆ

ಶೇಷಾದ್ರಿಪುರಂ, ಬೆಂಗಳೂರು

### ಅಂತರ ಪ್ರೌಢಶಾಲಾ ದೇವರ ನಾಮ ಮತ್ತು 5ನೇ ವಾದ್ಯ ಸಂಗೀತ ಸ್ಪರ್ಧೆ



ಶೇಷಾದ್ರಿಪುರಂ ಪ್ರೌಢಶಾಲೆಯು ನವೆಂಬರ್ 29, 2016ರಂದು ಶೇಷಾದ್ರಿಪುರಂ ದತ್ತಿಯ ಸಭಾಂಗಣದಲ್ಲಿ ಶ್ರೀ ಕೆ.ಸಿ. ಪುಟ್ಟನರಸಯ್ಯ ಮತ್ತು ವೈಣಿಕ ಶಿಖಾಮಣಿ ವೀಣೆ ಶೇಷಣ್ಣ ಸ್ಮರಣಾರ್ಥ 10ನೇ ಅಂತರ ಪ್ರೌಢಶಾಲಾ ದೇವರನಾಮ ಮತ್ತು ವಾದ್ಯ ಸಂಗೀತ ಸ್ಪರ್ಧೆಗಳನ್ನು ಆಯೋಜಿಸಿತ್ತು.

ಮುಖ್ಯ ಅತಿಥಿಯಾಗಿದ್ದ ಶಿರೋಮಣಿ ಡಾ. ಬಿ. ಕೆ. ಚಂದ್ರಮೌಳಿ ವಿಜೇತರಿಗೆ ಬಹುಮಾನ ವಿತರಿಸಿ, ಮಕ್ಕಳಲ್ಲಿ ಸಂಗೀತದ ಕಲಿಕಾಸಕ್ತಿ ಇನ್ನೂ ಹೆಚ್ಚಾಗಬೇಕು, ನಮ್ಮ ಪರಂಪರೆಯನ್ನು ಉಳಿಸಬೇಕೆಂದು ಪ್ರೋತ್ಸಾಹದ ನುಡಿಗಳನ್ನಾಡಿದರು.

ಕೆ.ಪಿ.ಸಿ. ಸ್ವಾಮಿ, ಸಂಗೀತ ಕಲಾರತ್ನ ಮೈಸೂರು ವಿ ಸುಬ್ರಹ್ಮಣ್ಯ, ಮೊದಲಾದ ಗಣ್ಯರು ಉಪಸ್ಥಿತರಿದ್ದರು. ಪ್ರಥಮ ಮತ್ತು ದ್ವಿತೀಯ ಬಹುಮಾನಗಳೊಂದಿಗೆ ಪರ್ಯಾಯ ಫಲಕವನ್ನು ವಿದ್ಯಾಮಂದಿರ ಪ್ರೌಢಶಾಲೆ ಪಡೆಯಿತು.

### 46ನೇ ಅಂತರ ಪ್ರೌಢಶಾಲಾ ಚರ್ಚಾ ಸ್ಪರ್ಧೆ 2016–17



ಶೇಷಾದ್ರಿಪುರಂ ಪ್ರೌಢಶಾಲೆಯು ನವೆಂಬರ್ 30, 2016ರಂದು ಶೇಷಾದ್ರಿಪುರಂ ದತ್ತಿಯ ಸಭಾಂಗಣದಲ್ಲಿ ದಿವಂಗತ ಜಿ.ಕೆ ಚಿಕ್ಕನರಸಿಂಹಯ್ಯನವರ ಸ್ಮರಣಾರ್ಥ 46ನೇ ಅಂತರ ಪ್ರೌಢಶಾಲಾ ಚರ್ಚಾ ಸ್ಪರ್ಧೆಯನ್ನು ಆಯೋಜಿಸಿತ್ತು. ಈ ಸ್ಪರ್ಧೆಯಲ್ಲಿ 10 ಶಾಲೆಗಳ 20 ಅಭ್ಯರ್ಥಿಗಳು ಭಾಗವಹಿಸಿದ್ದರು. "ಏಕರೂಪ ಶಿಕ್ಷಣ ಪದ್ಧತಿಯಿಂದ ದೇಶದ ಸಮಗ್ರ ಪ್ರಗತಿ ಸಾಧ್ಯ" ಈ ವಿಷಯದ ಪರ ಮತ್ತು ವಿರೋಧ ಚರ್ಚೆ ನಡೆಯಿತು. ಪ್ರಥಮ ಮತ್ತು ತೃತೀಯ ಬಹುಮಾನಗಳನ್ನು ಪಡೆದು ಶೇಷಾದ್ರಿಪುರಂ ಪ್ರೌಢಶಾಲೆಯು ಪರ್ಯಾಯ ಪಾರಿತೋಷಕವನ್ನು ಪಡೆದುಕೊಂಡಿತು.

## ಶೇಷಾದ್ರಿಪುರಂ ಸ್ತ್ರೀ ಸಮಾಜ ಮಾಧ್ಯಮಿಕ ಶಾಲೆ

ಶೇಷಾದ್ರಿಪುರಂ, ಬೆಂಗಳೂರು

### 25ನೇ ವರ್ಷದ ನಾಟಕ ಮತ್ತು ಸಮೂಹ ಗಾಯನ ಸ್ಪರ್ಧೆ



ಶೇಷಾದ್ರಿಪುರಂ ಸ್ತ್ರೀ ಸಮಾಜ ಮಾಧ್ಯಮಿಕ ಶಾಲೆಯು ವರಕವಿ ದ.ರಾ.ಬೇಂದ್ರೆ ಮತ್ತು ಡಾ. ಜಿ.ಪಿ. ರಾಜರತ್ನಂ ಅವರ ಸ್ಮರಣಾರ್ಥ 25ನೇ ವರ್ಷದ ನಾಟಕ ಮತ್ತು ಸಮೂಹ ಗಾಯನ ಸ್ಪರ್ಧೆಗಳ ಸಮಾರಂಭವನ್ನು ಇತ್ತೀಚೆಗೆ ಆಯೋಜಿಸಿತ್ತು. ಡಾ. ಸಿ.ಯು. ಮಂಜುನಾಥ್ ಹಿರಿಯ ಸಾಹಿತಿಗಳು ಹಾಗೂ ಸಂಶೋಧಕರು, ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

## ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್

ಕೆಂಗೇರಿ ಉಪನಗರ, ಬೆಂಗಳೂರು

### ಅಂಬೇಡ್ಕರ್ ಮಹಾಪರಿನಿರ್ವಾಣ ದಿನಾಚರಣೆ



ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಕಾಲೇಜಿನ ಅಂಬೇಡ್ಕರ್ ಅಧ್ಯಯನ ಕೇಂದ್ರದ ವತಿಯಿಂದ ಅಂಬೇಡ್ಕರ್‌ರವರ 61ನೇ ವರ್ಷದ ಮಹಾಪರಿನಿರ್ವಾಣ ದಿನದ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜಿನ ಸಹ ಪ್ರಾಧ್ಯಾಪಕ ಡಾ. ಎನ್. ದಶರಥ್‌ರವರು ಆಗಮಿಸಿ "ಭಾರತದ ಸಂವಿಧಾನದಲ್ಲಿ ಅಂಬೇಡ್ಕರ್‌ರವರ ವಿಚಾರಗಳು" ಎಂಬ ವಿಷಯವನ್ನು ಕುರಿತು ಮಾತನಾಡಿದರು. ಭೀಮರಾವ್ ಪತ್ರಿಕೆಯ ಸಂಪಾದಕ ನಾಗರಾಜ್ ಸೋಮನಹಳ್ಳಿ, ಆಡಳಿತ ಸಂಪಾದಕ ನಿರ್ಮಲ ಹೊಸಕೋಟೆ, ಹಂಸ ಜ್ಯೋತಿ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಮು. ಮುರಳೀಧರ್, ಅಂಬೇಡ್ಕರ್ ಅಧ್ಯಯನ ಕೇಂದ್ರದ ಸಂಚಾಲಕ ಪ್ರೊ. ಲಕ್ಷ್ಮೀನಾರಾಯಣ ಹಾಜರಿದ್ದರು.

"ಇಂಗ್ಲೆಂಡಿನಲ್ಲಿ ಇಂಗ್ಲಿಷ್ ಇರುವಂತೆ, ಫ್ರಾನ್ಸನಿನಲ್ಲಿ ಫ್ರೆಂಚ್ ಇರುವಂತೆ, ಕರ್ನಾಟಕದಲ್ಲಿ ಕನ್ನಡವಿರಬೇಕು. ಈ ಆಶಯದಲ್ಲಿ ಅಸ್ವಾಭಾವಿಕ ಲವಲೇಶವೂ ಇಲ್ಲ" – ಕುವೆಂಪು

# Events

## Seshadripuram First Grade College
Yelahanka, Bengaluru

### One-Day Sensitisation Programme



On 19 Sept. 2016, Seshadripuram First Grade College, Yelahanka had organised a One-day Sensitisation Programme on, 'Cancer in Contemporary Society'. The programme was inaugurated by Dr. B.S. Ajaikumar, Chairman & C.E.O., Healthcare Global (H.C.G.) Enterprises Ltd., Bengaluru. Other speakers on this occasion were Dr. G. Kilara, M.D., H.C.G.-M.S.R. Cancer Centre and Dr. Vineet Gupta, renowned Medical Oncologist and Blood Disorder Specialist, Sakra World Hospital. The chief guest on this occasion was Padma Vibhushana Awardee, Dr. V. K. Aatre, Former Chief, D.R.D.O.

### Inauguration of 'Kalakusuma - The Theatre Club'



On 28 Sept. 2016, Seshadripuram First Grade College, Yelahanka inaugurated, 'Kalakusuma-The Theatre Club'. Renowned Kannada Litterateur and Jnanapeetha Awardee - Dr. Chandrashekar Kambara was the chief guest on this occasion.

## Seshadripram P.U. College, (Main)
Seshadripuram, Bengaluru

### Annual Sports Meet



On 18 Nov. 2016, Seshadripram P.U. College, (Main) held their Annual Sports Meet 2016-17 at Central College Ground.

## Seshadripuram Academy of Business Studies
Kengeri, Bengaluru

### Entrepreneur Mela




On 26 Sept. 2016, Seshadripuram Academy of Business Studies, Kengeri had organised an, 'Entrepreneur Mela' which was inaugurated by Mr. Sathyanarayan and Mrs. Anuradha Sathyanarayan, Founders, Consumax Foundation.




# BULLYING

We often think of children as innocent, angelic creatures, we perceive childhood as a beautiful, idyllic time filled with fun and play. While this can and perhaps should be true, there is also a darker face to childhood. In a wicked world, children too can be cruel, traumatising another sometimes for life.

While we celebrate Children's day this issue by presenting the beautiful artistic and literary expressions of children from S.E.T. schools (Pg.12), as adults we deemed it equally important to bring out a darker slice of this very determining phase of human life.

We wish to address the problem of bullying that lurks in schools and neighbourhoods, one that is more serious than we might think only so that it may be tackled and life for children may be restored to what it should be.

To start with, bullying is unwanted, aggressive behaviour by children towards other children due to a real or perceived power imbalance. The behaviour is repeated, or has the potential to be repeated, over time.

**Types of Bullying**




* Multiple types of bullying can be selected.

Types of bullying include verbal bullying such as—name calling, insulting, making comments and threatening; physical bullying like hitting, pushing, damaging or snatching away property and stealing. In worst cases physical bullying can also involve use of weapons. Social bullying can involve spreading rumours, ignoring and exclusion. Cyber bullying can take place in the form of posting homophobic, sexual or racially insulting comments or images, threats etc..on the social medias or over messages on cell phones.

Both kids who are bullied and who bully others may have serious, lasting problems.

**Effects of Bullying**




"Children are like wet cement. Whatever falls on them makes an impression." — Dr. Haim Ginott

Bullied children can suffer from depression, anxiety, panic attacks, physical injury, lack of interest, trust issues, decreased academic performance and low self-esteem. They can also resort to self-mutilation, substance abuse and have suicidal thoughts.

Another damaging repercussion is bullying is often cyclical. Students who have been bullied can, in an attempt to gain their power and self-esteem back, become school bullies themselves.

### The Bully

Coming to the bullies themselves, they dominate, blame, use and target others and don't accept the consequences of their actions. They lack empathy and foresight and have contempt for others they perceive as weak, which in truth is a display of their own vulnerability.

Bullies who are not confronted or stopped may find themselves in future positions where they can bully as adults. This is where manipulative bosses, violent spouses and child abusers come from.

However, it is important to realise they are victims too. Bullying might be a result of loneliness and a cry for attention which they may lack.

Research has shown that bullies are a consequence of negative parenting traits such as-a destructive emotional attitude, lack of warmth and involvement, extremely authoritative parenting, physical punishment etc..

Thus, bullies may also just be imitating adult role-models who display angry, aggressive behaviour and don't handle conflict well. These people may be -parents, relatives, teachers, coaches, television and other media.

Bullies too suffer poor academic performance, and can resort to substance abuse. Children who have witnessed bullying too suffer.

Keeping these things in mind it is important to handle both the bully and the bullied with utmost care.

### Tackling the Problem

It is important that the problem of bullying is tackled on various levels. Parents, teachers, counsellors and institutions can all come together to rectify the bully and empower the bullied.

**Here are some handy tips to deal with the issue:** Physical and emotional safety of students must be the top most priority of institutions. Therefore, it is extremely important for institutions to take steps towards tackling bullying.

Concerned authorities must make it clear to students that bullying is not allowed on campus. Teachers can be sensitised to understand the background of students, their peer group and other issues concerning them. Teachers must let students know that they are approachable and that they can be relied upon for help. Schools can also stress to parents the need to provide children not only a physical but also an emotionally healthy, stable environment at home. Institutions may take the help of professional counsellors and also install suggestion boxes where students can report incidents. The campus may also be put under C.C.T.V. surveillance and one must not hesitate to involve authorities in extreme cases. Students may also be sensitised regarding the issue through movie screenings, role-play and visiting rehabs etc…

5 Ways to Handle a Bully




### Helping the Victim

- Empower the victim to help themselves
- Build confidence, assertiveness and better coping mechanisms with warmth and affection
- Let them know they are not alone
- Encourage them to develop their talents and boost their self-esteem

### What not to tell a child getting bullied

- Don't tell the child to ignore the bully, the bully may take it as a need to intensify the assault.
- Don't tell the child to fight back, the school may not see it as self-defense and the child may get further penalised.
- Do not deal with the bully's parents directly, don't be accusing, they may feel affronted, use a mediator.

### Helping the Bully

- Appreciate and reinforce positive behaviour
- Set realistic goals, don't expect overnight change
- Assure the child that they are loved and you only want to help them
- Communicate that it is only the behaviour that is unpleasant and needs to be changed
- Channelise aggression into some sport or outdoor activity
- Counsel the parent; ensure the child has a healthy home environment

Remember ........

***Never be bullied into silence. Never allow yourself to be made a victim. Accept no one's definition of your life, but define you.***

*- Tim Fields*

*Nalini Harish & Tejaswini P.*
*Dept. of English,*
*Seshadripuram College, Seshadripuram*

## Suggested Reading




## *A Poem About Bullying*




"Let us sacrifice our today so that our children can have a better tomorrow." — A. P. J. Abdul Kalam

# Reports

## Seshadripuram Group of Institutions

## Centre for Global Excellence

### Meeting with Prof. Daniel Khan, O.B.E., C.O.O, Institute of Productivity, U.K.



The Centre for Global Excellence has had a long and fruitful association with the Institute of Productivity (I.o.P.), U.K. It has been offering programmes on Productivity and Employability skills in association with I.o.P, U.K. and the National Open College Network (N.O.C.N.), U.K. since the past few years which are conducted by industry experts from IoP.

For a while now, C.G.E. has nursed the vision of setting up an I.o.P., Bangalore centre on the Seshadripuram campus and in this connection invited Prof. Daniel Khan, O.B.E., Chief Operating Officer, I.o.P., U.K. and Principal and Chief Executive, Public Relations and Communications, St. Patrick's International College, U.K., for discussion on 27 Oct., 2016 to the Seshadripuram campus.

Prof. Khan who was delighted with the prospect, promised to visit us once again in Jan. 2017 for inaugurating the centre. In the meantime, he also promised to deliver programmes for Leadership Development exclusively focusing on Principals.

In addition, the institutions have also decided to explore opportunities in M.S.M.E. design, Train the Trainer programmes for our faculty and also pursue collaborative research work.

### Visit of Dr. Sam Beldona, Professor and Dean, Dominican University of California, U.S.A.



In today's world, youngsters need and deserve an education that equips them to be global citizens. In order to achieve this objective; an interactive session was arranged by C.G.E. with Dr. Sam Beldona, Professor and Dean, Barowsky School of Business, Dominican University of California, U.S.A on 7 Dec. 2016.

Dr. Beldona met with Hon. General Secretary Dr. Wooday P. Krishna, Seshadripuram Group of Institutions, Dr. M. Prakash, Director of Studies, Seshadripuram Group of Institutions and Prof. Ramesh Kumar, Advisor, Overseas Centre for Foreign Students (O.C.F.S.), Karnataka State Higher Education Council and the staff of Seshadripuram Academy for Global Excellence (S.A.G.E.).

The discussion was regarding organising customised Taster Programmes for a time period of four week to eight months in different domains. In addition, there was a proposal to explore opportunities for faculty mobility programmes such as- Train the Trainer, Faculty exchange programmes, collaborative research and so on.

Following this, he addressed Postgraduation students and faculty and shared his thoughts about employability skills required for the 21st century, future career opportunities and the role of educational institutions.

### Two-Week Taster Programme on, 'Productivity and Innovation' at Grimsby Institute of Further and Higher Education, U.K.



Keeping in mind the changing global scenario thanks to technology innovations, C.G.E. offered a Two-week taster programme on, 'Productivity and Innovation' to the undergraduate and postgraduate students of Seshadripuram Institutions at Grimsby Institute of Further and Higher Education, U.K. This was the first taster programme to be organised by Seshadripuram Group of Institutions, India at the Grimsby Institute of Further and Higher Education, U.K.

Fifteen students who enrolled for the programme headed to U.K. to partake in this highly enriching experience of building a valuable cross-cultural skill set that would be extremely relevant no matter what their domain. The programme was successfully conducted from 5th – 20th October, 2016.

The team was headed by Dr. Bhargavi V.R., Coordinator, Centre for Global Excellence, Seshadripuram Group of Institutions. The teaching pedagogy was the highlight of the programme, where role plays, case study, discussions, group exercises and simulation were used. An industrial visit was arranged followed by report writing and presentation of the observations, which were video recorded.

Students were interviewed on Estuary T.V., the T.V. channel of the Institute managed by the faculty and students of Media studies. The entire journey was very meaningful and came to an end with the Certificate Distribution ceremony in the presence of the Vice-Principal, Commercials-Mr. Tony Bell, Ms. Lesley Charlesworth Brown, Director of Business and Professional Development, Dr. Kori Raj, Former Governor of the Institute and other esteemed faculty members. All in all, it was a unique and useful educational experience.

### Google Team Visits Campus



It is a matter of great pride that on 12 Aug.2016, Google employees from U.S.A. visited the Seshadripuram campus with the purpose of showcasing to our students a learning app they are working on and gaining student feedback regarding its various aspects.

The interaction was beneficial to our student community as the app they were testing offers video content from all over the world, including tonnes of educational content that could further enrich their knowledge. The app will also enable them to share informative videos with each other, without using any data. Our students can take pride in the fact that they helped shape the development of such an app by giving their invaluable feedback.

The team interacted with a select group of 12 students for about 4 hours. At the end of the session, they presented tokens of appreciation for their inputs.

"Don't worry that children never listen to you; worry that they are always watching you. " — Robert Fulghum

# ರಾಷ್ಟ್ರೀಯ ಹಬ್ಬ ಗಾಂಧಿ ಜಯಂತಿ



**1947ರ ಆಗಸ್ಟ್‌ನಲ್ಲಿ ದೆಹಲಿಯಲ್ಲಿ ಕಾಂಗ್ರೆಸ್ ಧುರೀಣರು ಸ್ವಾತಂತ್ರ್ಯದ ವಿಜಯೋತ್ಸವವನ್ನು ಆಚರಿಸುತ್ತಿದ್ದಾಗ ಗಾಂಧೀಜಿ ತನ್ನ ಕೆಲವು ಆಪ್ತ ಸಂಗಡಿಗರ ಜೊತೆಗೆ ದೆಹಲಿಯಿಂದ ಬಹುದೂರದಲ್ಲಿರುವ ನೌಕಾಲಿಯಲ್ಲಿ ಕೋಮು ಉದ್ವಿಗ್ನತೆಯ ಸನ್ನಿವೇಶದಲ್ಲಿ ಹಿಂದೂ–ಮುಸ್ಲಿಂ ಸೌಹಾರ್ದತೆಯ ಪ್ರಯತ್ನಗಳನ್ನು ನಡೆಸುತ್ತಿದ್ದರು. ಇದು ಗಾಂಧಿ ಅವರು ತತ್ವಜ್ಞಾನಿಯಾಗಿ ಹಾಗೂ ರಾಜಕಾರಣಿಯಾಗಿ ಅನುಭವಿಸಿದ ತಾತ್ವಿಕ ಸಂಕಷ್ಟ ಹಾಗೂ ರಾಜಕೀಯ ಏಕಾಕಿತನ.**

ಅಕ್ಟೋಬರ್ 2 ನಮ್ಮ ದೇಶಾದ್ಯಂತ ಆಚರಿಸುವ ರಾಷ್ಟ್ರೀಯ ಹಬ್ಬ. ಕಾರಣ ಅಂದು ಗಾಂಧಿ ಜಯಂತಿ, ಜೊತೆಗೆ ಭಾರತದ ಸ್ವಾತಂತ್ರ್ಯ ಹೋರಾಟಗಾರರಲ್ಲೊಬ್ಬರಾದ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮ ದಿನವೂ ಹೌದು. ಮಹಾನ್ ವ್ಯಕ್ತಿಗಳ ಜನ್ಮದಿನವಾದ ಅಕ್ಟೋಬರ್ 2ರಂದು ರಾಜ್ಯಾದ್ಯಂತ ಮದ್ಯಪಾನವನ್ನು ಸಹ ಸರ್ಕಾರ ನಿಷೇಧಿಸಿರುವುದು ಹೆಮ್ಮೆಯ ಸಂಗತಿ. ಗಾಂಧೀಜಿ ಎಂದೊಡನೆ ಸರಳ ಜೀವನದ ಸಾಕಾರ ಮೂರ್ತಿ ನಮ್ಮ ಮುಂದೆ ನಿಲ್ಲುತ್ತದೆ.

'ಇಂತಹ ವ್ಯಕ್ತಿಯೊಬ್ಬ ಭೂಮಿ ಮೇಲೆ ನಡೆದಾಡಿದ್ದ ಎಂಬುದನ್ನು ನಂಬುವುದಕ್ಕೆ ಮುಂದಿನ ಪೀಳಿಗೆಗಳಿಗೆ ಕಷ್ಟವಾಗಬಹುದು' ಎಂದು ಮಹಾತ್ಮ ಗಾಂಧಿಯವರನ್ನು ಕುರಿತು ವಿಜ್ಞಾನಿ ಐನ್‌ಸ್ಟೀನ್ ಹೇಳಿದ ಮಾತುಗಳಿವು.

ಗ್ರಾಮಗಳಲ್ಲಿ ರಚನಾತ್ಮಕ ಕಾರ್ಯಗಳು ಆಗಬೇಕು. ಇವುಗಳು ಆಗಬೇಕಾದರೆ ಅದಕ್ಕೆ ಹೆಚ್ಚಿನ ತಾಳ್ಮೆ ಮತ್ತು ಸಮಯಾವಕಾಶ ಬೇಕಾಗುತ್ತದೆ. ಭಾರತ ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರಗತಿ ಕಾಣಬೇಕಾದರೆ ಗ್ರಾಮಗಳು ಆರ್ಥಿಕ ಚಟುವಟಿಕೆಯ ಕೇಂದ್ರಗಳಾಗಬೇಕು ಎಂಬುದು ಗಾಂಧೀಜಿ ಅವರ ನಿಲುವು ಆಗಿತ್ತು. ಅಹಿಂಸೆಯ ಆಧಾರದ ಮೇಲೆ ಪ್ರತಿಯೊಬ್ಬರಿಗೂ ಸಮಾನತೆ ಮತ್ತು ನ್ಯಾಯವನ್ನು ಖಚಿತಪಡಿಸುವ ಸಾಮಾಜಿಕ ಸಮಾನಗುರಿ ಗಾಂಧಿಯವರದ್ದಾಗಿತ್ತು. ನಮ್ಮನ್ನು ಪ್ರೀತಿಸುವವರನ್ನು ಮಾತ್ರವಲ್ಲ, ನಮ್ಮನ್ನು ದ್ವೇಷಿಸುವವರನ್ನೂ ನಾವು ಪ್ರೀತಿಸಬೇಕು ಎಂಬ ಅವರ ವಿಚಾರ ಅಹಿಂಸೆಗೆ ಹೊಸ ಪರಿಕಲ್ಪನೆಯನ್ನೇ ನೀಡಿದೆ.

ಗ್ರಾಮಗಳಲ್ಲಿ ರಚನಾತ್ಮಕ ಕಾರ್ಯಗಳು ಆಗಬೇಕು ಎಂಬ ಹಿನ್ನೆಲೆಯಲ್ಲಿ ಗ್ರಾಮ ಉದ್ಯೋಗ ಮತ್ತು ಉದ್ಯಮವನ್ನು ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಲೇ ತಮ್ಮದೇ ಆದ ಆರ್ಥಿಕ ಸಿದ್ಧಾಂತವನ್ನು ಕಟ್ಟಿಕೊಟ್ಟರು. ಭಾರತದಲ್ಲಿ ಉಚಿತ ಹಾಗೂ ಪ್ರಾಥಮಿಕ ಶಿಕ್ಷಣ ಪದ್ಧತಿ ಜಾರಿಗೆ ಬರಬೇಕೆನ್ನುವುದು ಗಾಂಧೀಜಿಯವರ ಖಚಿತ ನಿಲುವಾಗಿತ್ತು. ಗಾಂಧೀಜಿಯವರು ಉಚ್ಚ ಶಿಕ್ಷಣವನ್ನು ವಿರೋಧಿಸಲಿಲ್ಲ, ಆದರೆ ವಿದೇಶಿ ಭಾಷಾ ಮಾಧ್ಯಮದ ಮೂಲಕ ನೀಡುವ ಶಿಕ್ಷಣ ರಾಷ್ಟ್ರದ ಭೌದ್ಧಿಕತೆ ಮತ್ತು ನೈತಿಕತೆಗೆ ಅಪಾಯಕಾರಿಯಾಗಿದೆ ಎನ್ನುವುದು ಅವರ ಅಭಿಪ್ರಾಯವಾಗಿದೆ.

ಖಾದಿಯ ಮೂಲಕ ಸ್ವದೇಶಿ ಸತ್ಯಾಗ್ರಹಕ್ಕೆ ಅಂಕಿತ ಹಾಕಿದವರು ಮಹಾತ್ಮ ಗಾಂಧಿ. ರೈತರು ಬೆಳೆದ ಹತ್ತಿಯಿಂದ ತೆಗೆದ ನೂಲು ಬಳಸಿ ನೇಕಾರರು ಬಟ್ಟೆ ಮಾಡುತ್ತಿದ್ದರು. ಇದರಿಂದ ಕೃಷಿಕರಿಗೆ ಎರಡು ಹೊತ್ತು ಊಟ ಮಾಡಲು ಸಾಧ್ಯವಾಯಿತು.

ಗಾಂಧೀಜಿಯವರು ಮಹಿಳೆ, ಮಾನವತೆ, ಗ್ರಾಮೋದ್ಯೋಗ, ಗ್ರಾಮೋದ್ಧಾರದ ಪರವಾಗಿ, ಬ್ರಿಟಿಷರ ಅಸ್ಪೃಶ್ಯತೆ ವಿರುದ್ಧ ಹೋರಾಟ ನಡೆಸಿದ್ದು ಮಾತ್ರವಲ್ಲದೆ, ಗೋವುಗಳ ಕುರಿತೂ ಅನೇಕ ಸಕಾರಾತ್ಮಕ ನಿಲುವುಗಳನ್ನು ಪ್ರಕಟಿಸಿದ್ದರು. ಗಾಂಧಿ ಆಧುನಿಕ ಭಾರತದ ಒಬ್ಬ ವಿಶಿಷ್ಟ ತತ್ವಜ್ಞಾನಿ ಮತ್ತು ಜನನಾಯಕ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ವಹಿಸಿದ ನಾಯಕತ್ವ ಅನುಕರಣೀಯ. 1947ರ ಆಗಸ್ಟ್‌ನಲ್ಲಿ ದೆಹಲಿಯಲ್ಲಿ ಕಾಂಗ್ರೆಸ್ ಧುರೀಣರು ಸ್ವಾತಂತ್ರ್ಯದ ವಿಜಯೋತ್ಸವವನ್ನು ಆಚರಿಸುತ್ತಿದ್ದಾಗ ಗಾಂಧೀಜಿ ತನ್ನ ಕೆಲವು ಆಪ್ತ ಸಂಗಡಿಗರ ಜೊತೆಗೆ ದೆಹಲಿಯಿಂದ ಬಹುದೂರದಲ್ಲಿರುವ ನೌಕಾಲಿಯಲ್ಲಿ ಕೋಮು ಉದ್ವಿಗ್ನತೆಯ ಸನ್ನಿವೇಶದಲ್ಲಿ ಹಿಂದೂ ಮುಸ್ಲಿಂ ಸೌಹಾರ್ದತೆಯ ಪ್ರಯತ್ನಗಳನ್ನು ನಡೆಸುತ್ತಿದ್ದರು. ಇದು ಗಾಂಧಿ ಅವರು ತತ್ವಜ್ಞಾನಿಯಾಗಿ ಹಾಗೂ ರಾಜಕಾರಣಿಯಾಗಿ ಅನುಭವಿಸಿದ ತಾತ್ವಿಕ ಸಂಕಷ್ಟ ಹಾಗೂ ರಾಜಕೀಯ ಏಕಾಕಿತನ. ಗಾಂಧಿ ಅವರು ವಿಶ್ವದಾದ್ಯಂತ ಅಧ್ಯಯನಶೀಲತೆಗೆ ಒಳಗಾದ ಚಿಂತಕರು.

ಪಾಶ್ಚಿಮಾತ್ಯ ನಾಗರಿಕತೆಗೆ ಕುರಿತಾದ ಕಟು ವಿಮರ್ಶೆಯ ಹಿನ್ನೆಲೆಯಲ್ಲಿ ಗಾಂಧಿ 'ಸ್ವರಾಜ್ಯ' ಎನ್ನುವ ಒಂದು ವಿಶಿಷ್ಟವಾದ ಪ್ರತಿಪಾದನೆಯನ್ನು ಭಾರತ ಹಾಗೂ ಜಗತ್ತಿನ ಮುಂದೆ ಇಡುತ್ತಾರೆ. ಭಾರತದ ಸಂವಿಧಾನದ ಕರಡು ಪ್ರತಿಯನ್ನು ಗಾಂಧೀಜಿಯವರ ಮುಂದೆ ಇರಿಸಿದಾಗ 'ಇದು ತಾನು ಪರಿಭಾವಿಸಿದ ಸಂವಿಧಾನವಲ್ಲ' ಎಂದು ಘೋಷಿಸಿದ ಅವರು ತಮ್ಮ ಕಾರ್ಯದರ್ಶಿ ನಾರಾಯಣ್‌ರನ್ನು ಕೂರಿಸಿಕೊಂಡು ಬೇರೆಯೇ ಒಂದು ಸಂವಿಧಾನವನ್ನು ಸಿದ್ಧಪಡಿಸಿದರು. ಧರ್ಮ ಮತ್ತು ರಾಜಕಾರಣಗಳ ಸಂಬಂಧದ ಕುರಿತು ಗಾಂಧಿ ಮತ್ತು ಅಂಬೇಡ್ಕರ್ ನಡೆಸಿದ ಸೂಕ್ಷ್ಮ ಚಿಂತನೆಗಳನ್ನು ನಾವು ಮುನ್ನೆಲೆಗೆ ತರಬೇಕಿದೆ. ಅವುಗಳ ನೆಲೆಗಟ್ಟಿನಲ್ಲಿ ನಮ್ಮ ಸೆಕ್ಯುಲರ್ ರಾಜಕಾರಣದ ತಾತ್ವಿಕತೆಯನ್ನು ಮರುಪರಿಶೀಲಿಸಬೇಕಿದೆ. ಭಾರತದ ಸೆಕ್ಯುಲರ್‌ವಾದ ಈ ದೇಶದ ಸಾಂಸ್ಕೃತಿಕ ಸಿರಿವಂತಿಕೆಯನ್ನು ಒಳಗೊಳ್ಳುವ, ಧಾರ್ಮಿಕ ಸಂವೇದನೆಗಳನ್ನು ಗೌರವಿಸುವ ಆದರೆ ಅಸಮಾನತೆಯನ್ನು ವಿರೋಧಿಸುವ ಸಂಪನ್ಮೂಲದ ಪ್ರಜಾತಂತ್ರಿಕ ವಿತರಣೆಯನ್ನು ನಿರ್ವಹಿಸುವ ಸಾಧನವಾಗಬೇಕು.

### ಗಾಂಧಿಯವರ ತತ್ವಗಳು

ಸತ್ಯ, ಅಹಿಂಸೆ, ಸಸ್ಯಾಹಾರ, ಬ್ರಹ್ಮಚರ್ಯೆ, ಸರಳತೆ, ಧರ್ಮಶ್ರದ್ಧೆ ಮುಂತಾದವುಗಳನ್ನು ತಮ್ಮ ಜೀವನದುದ್ದಕ್ಕೂ ಅಳವಡಿಸಿಕೊಂಡ ಗಾಂಧೀಜಿ ಅವರು ಇವರ ಅನುಯಾಯಿಗಳು ಹಾಗೂ ಇತರರು ಹಾಗೆಯೇ ಮಾಡುವಂತೆ ಪ್ರೇರೇಪಿಸಿದರು. ಜಾನ್ ರಸ್ಕಿನ್‌ರವರ 'ಅನ್ ಟು ದಿಸ್ ಲಾಸ್ಟ್' ಕೃತಿಯನ್ನು ಒದಿದ ನಂತರ ತಮ್ಮ ಜೀವನಶೈಲಿಯನ್ನು ಬದಲಿಸಿಕೊಳ್ಳಲು ಹಾಗೂ ಫಿನಿಕ್ಸ್ ಸೆಟ್ಲಮೆಂಟ್ ಎಂಬ ಸಮುದಾಯವೊಂದನ್ನು ರೂಪಿಸಲು ಅವರು ನಿರ್ಧರಿಸಿದರು. ಭಾರತದ ಅತಿ ಬಡವ್ಯಕ್ತಿ ತಮ್ಮನ್ನು ಒಪ್ಪುವ ರೀತಿಯಲ್ಲಿ ಉಡುಪು ಧರಿಸಿದ ಅವರು ತಮ್ಮ ಮೂಲಕ ಮನೆಯಲ್ಲಿ ನೂಲಿನ ಬಟ್ಟೆ ಬಳಕೆಯನ್ನು ಸಮರ್ಥಿಸಿಕೊಂಡರು. ಗ್ರಾಮ ಉದ್ಯೋಗ ಮತ್ತು ಉದ್ಯಮವನ್ನು ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಲೇ ತಮ್ಮದೇ ಆದ ಆರ್ಥಿಕ ಸಿದ್ಧಾಂತವನ್ನು ಕಟ್ಟಿಕೊಟ್ಟರು.

ಭಾರತದ ಸಮಸ್ಯೆಗಳ ಮೂಲ ಕಾರಣಗಳನ್ನು ಗುರುತಿಸಿದ ಗಾಂಧೀಜಿಯವರು ಅವುಗಳನ್ನು ಪರಿಹರಿಸಲು ಸಪ್ತ ಪಾತಕಗಳಾದ

1. ತತ್ವರಹಿತ ರಾಜಕಾರಣ, 2. ದುಡಿಮೆ ಇಲ್ಲದ ಸಂಪತ್ತು, 3. ಆತ್ಮಸಾಕ್ಷಿ ಇಲ್ಲದ ಸಂತೋಷ, 4. ಚಾರಿತ್ರ್ಯವಿಲ್ಲದ ಶಿಕ್ಷಣ, 5. ನೀತಿ ಇಲ್ಲದ ವ್ಯಾಪಾರ, 6. ಮಾನವೀಯತೆ ಇಲ್ಲದ ಜ್ಞಾನ, 7. ತ್ಯಾಗವಿಲ್ಲದ ಪೂಜೆಯಿಂದ ದೂರವಿರಬೇಕು, ಎಂದು ತಿಳಿಸಿದ್ದಾರೆ.

ಗಾಂಧೀಜಿಯವರ ತತ್ವಗಳಿಗೆ ಮುಖ್ಯ ಸ್ಫೂರ್ತಿ 'ಭಗವದ್ಗೀತೆ' ಮತ್ತು ರಷ್ಯದ ಪ್ರಸಿದ್ಧ ಸಾಹಿತಿ ಲಿಯೋ ಟಾಲ್‌ಸ್ಟಾಯ್ ಅವರ ಬರಹಗಳು. ಗಾಂಧೀಜಿಯವರು ಅಮೆರಿಕನ್ ಸಾಹಿತಿ ಹೆನ್ರಿ ಡೇವಿಡ್ ಥೋರ್ಯುನ ಪ್ರಬಂಧಗಳಿಂದಲೂ ಪ್ರಭಾವಿತರಾಗಿದ್ದರು. ಪ್ರತಿಯೊಂದು ಧರ್ಮದ ತಿರುಳಲ್ಲಿಯೂ 'ಸತ್ಯ ಮತ್ತು ಪ್ರೀತಿ' ಇರುತ್ತವೆ ಎಂಬುದನ್ನು ಗಾಂಧೀಜಿಯವರು ನಂಬಿದ್ದರು. ತಮ್ಮ ಧರ್ಮವೂ ಸೇರಿದಂತೆ ಎಲ್ಲಾ ಧರ್ಮಗಳಲ್ಲಿನ ಆಷಾಢಭೂತಿತನ ದುರಾಚಾರ ಹಾಗೂ ಮತತ್ವಗಳನ್ನು ಅವರು ಪ್ರಶ್ನಿಸಿದರು. ಧರ್ಮದಲ್ಲಿನ ಸಾಮಾಜಿಕ ಸುಧಾರಣೆಗೆ ಸಂಬಂಧಿಸಿದಂತೆ ಅವರು ಓರ್ವ ದಣಿವರಿಯದ ಸಮರ್ಥಕರಾಗಿದ್ದರು.

### ರಾಷ್ಟ್ರೀಯ ಉದ್ಯೋಗ ಖಾತರಿ

ಮಹಾತ್ಮ ಗಾಂಧಿಯವರ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯು ಗ್ರಾಮೀಣ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದ್ದು, ಗ್ರಾಮಗಳಲ್ಲಿನ ಜನತೆಗೆ ವರ್ಷದಲ್ಲಿ 100 ದಿನ ಉದ್ಯೋಗ ಸೃಷ್ಟಿಸುವ ಮೂಲಕ ಗ್ರಾಮಾಂತರ ಪ್ರದೇಶದ ಜನರಿಗೆ ವರದಾನವಾಗಿದೆ. 'ಈ ಭಾನುವಾರ'ದಲ್ಲಿ 29 ಸೆಪ್ಟೆಂಬರ್ 2013ರಂದು ಶಿವಾನಂದ ಕಳವೆಯವರು ಬರೆದಿರುವಂತೆ ದೇಶಕ್ಕೆ ಸ್ವಾತಂತ್ರ್ಯ ದೊರಕುವ ಮುನ್ನವೇ ಗಾಂಧಿ ಜಯಂತಿ ಸಪ್ತಾಹವನ್ನು ಆಚರಿಸಿದ ಉದಾಹರಣೆಗಳಿವೆ. 1930–33ರ ಸಮಯದಲ್ಲಿ ಉತ್ತರ ಕನ್ನಡದ ಶಿರಸಿ ಸಿದ್ಧಾಪುರಗಳಿಂದ ಪ್ರಕಟವಾಗುತ್ತಿದ್ದ ಕರಪತ್ರ ಪತ್ರಿಕೆಯಲ್ಲಿ ಗಾಂಧಿ ಜಯಂತಿ ಆಚರಣೆ ಬಗ್ಗೆ ಸಾಕಷ್ಟು ವಿವರಗಳಿವೆ. 1931ರಲ್ಲಿ ಪ್ರಕಟವಾದ ಒಂದು ಸಂಚಿಕೆಯಲ್ಲಂತೂ ಗಾಂಧಿ ಜಯಂತಿ ಸಪ್ತಾಹವನ್ನು ಆಚರಿಸಲು ರಾಷ್ಟ್ರಪತಿ ಸರ್ಧಾರ್ ವಲ್ಲಭಾಬಾಯಿ ಪಟೇಲರ ಅಪ್ಪಣೆಯ ಪ್ರಸ್ತಾಪವಿದೆ.

### ಹಿರಿಯ ಪತ್ರಕರ್ತರಾಗಿ

ಗಾಂಧಿಯವರು ಓರ್ವ ಸಮೃದ್ಧ ಬರಹಗಾರರಾಗಿದ್ದರು. ದಕ್ಷಿಣ ಆಫ್ರಿಕಾದಲ್ಲಿದ್ದಾಗ 'ಇಂಡಿಯನ್ ಒಪೀನಿಯನ್' ಪತ್ರಿಕೆ, ಭಾರತಕ್ಕೆ ಮರಳಿದ ನಂತರ ಗುಜರಾತಿ, ಹಿಂದಿ ಮತ್ತು ಆಂಗ್ಲಭಾಷೆಗಳಲ್ಲಿ 'ಹರಿಜನ್' ಪತ್ರಿಕೆ, ಆಂಗ್ಲಭಾಷೆಯಲ್ಲಿ 'ಯಂಗ್ ಇಂಡಿಯಾ' ಪತ್ರಿಕೆ ಮತ್ತು 'ನವಜೀವನ್' ಎಂಬ ಗುಜರಾತಿ ಮಾಸಪತ್ರಿಕೆಯೂ ಸೇರಿದಂತೆ ಹಲವು ವೃತ್ತಪತ್ರಿಕೆಗಳನ್ನು ದಶಕಗಳ ಕಾಲ ಅವರು ಸಂಪಾದಿಸಿದ್ದರು.

### ಲಾಲ್ ಬಹದ್ದೂರ್ ಶಾಸ್ತ್ರಿ ದಿಟ್ಟತನ

ಭಾರತದ ಸ್ವಾತಂತ್ರ್ಯ ಹೋರಾಟಗಾರರಲ್ಲೊಬ್ಬರಾದ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜನ್ಮ ದಿನಾಚರಣೆಯನ್ನೂ ಇದೇ ದಿನ ಆಚರಿಸಲಾಗುತ್ತದೆ. 1965ರ ಇಂಡೋ–ಪಾಕ್ ಯುದ್ಧ ಸಂದರ್ಭ ಭಾರತದ ಪ್ರಧಾನಿಯಾಗಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ತೋರಿದ ದಿಟ್ಟತನ ಶತ್ರುಪಾಳಯವನ್ನು ಇಂದಿಗೂ ತಲೆ ಎತ್ತದಂತೆ ಮಾಡಿದೆ. ಕಿರಿಯ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡವರು. ಬಡತನದ ನಡುವೆಯೇ ಹೈಸ್ಕೂಲ್ ಹಂತದಿಂದಲೇ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದರು. ಮನೆಯವರ ಕನಸನ್ನು ಬದಿಗೊತ್ತಿ ಬ್ರಿಟೀಷರ ವಿರುದ್ಧದ ಆಂದೋಲನದಲ್ಲಿ ಧುಮುಕಿದರು. ಶಾಂತಿ ಅಹಿಂಸೆಯನ್ನು ಪ್ರತಿಪಾದಿಸುತ್ತಲೇ ಆತ್ಮಗೌರವದ ಹೋರಾಟ ಮುಂದುವರಿಸಿದರು. ಬಯಸದೇ ಅಧಿಕಾರಗಳ ಸರಣಿ ಅವರನ್ನು ಅರಸಿ ಬಂತು. ಲೋಕಸಭೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಹಿಡಿದು ಭಾರತದ ಪ್ರಧಾನಿಯಾಗಿ ಕೊನೆಯ ಉಸಿರೆಳೆಯುವವರೆಗೂ ಅವರ ಬದುಕಿನ ಯಾತ್ರೆಯನ್ನು ಪರಿಶುದ್ಧವಾಗಿ ಮುಗಿಸಿದರು. ಬೆರಳ ತುದಿಯಲ್ಲಿಯೇ ಅಧಿಕಾರವಿದ್ದರೂ ಅವರು ಅದನ್ನು ಎಂದೂ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳಲಿಲ್ಲ. ಕೇಂದ್ರ ಗೃಹಮಂತ್ರಿಯಾಗಿದ್ದಾಗಲೂ ಅವರು ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ರೈಲು ಅಪಘಾತದ ನೈತಿಕ ಹೊಣೆ ಹೊತ್ತು ರೈಲ್ವೆ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಇಂದಿನ ರಾಜಕಾರಣಿಗಳಿಗೆ ನೈತಿಕ ಪಾಠ ಹೇಳಿಕೊಟ್ಟವರು. ಇಂದಿಗೂ ಭಾರತಕ್ಕೆ ಆದರ್ಶಪ್ರಾಯ ವ್ಯಕ್ತಿ ಲಾಲ್ ಬಹದ್ದೂರ್ ಶಾಸ್ತ್ರಿ ಎನ್ನುವುದು ಸತ್ಯ. ದೇಶಪ್ರೇಮಿಗಳ ತ್ಯಾಗ ಬಲಿದಾನಗಳಿಂದ ಪಡೆದ ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವ ನಮ್ಮಲ್ಲಿ ವಿಶೇಷವಾಗಿ ವಿದ್ಯಾರ್ಥಿಗಳು ಮತ್ತು ಯುವಪೀಳಿಗೆಯಲ್ಲಿ ಕೃತಜ್ಞತಾ ಭಾವನೆ ಮೂಡಬೇಕಿದೆ. ಜವಾಬ್ದಾರಿ ವರ್ತನೆ ಬೆಳೆಯಬೇಕಿದೆ. ರಾಷ್ಟ್ರೀಯತೆ ಕಂಡುಬರಬೇಕಿದೆ.

**ಶಾಂತಮ್ಮ,**
ಹಿರಿಯ ಪತ್ರಕರ್ತರು



**ಸುಲಿದ ಬಾಳೆಯ ಹಣ್ಣಿನಂದದಿ ಕಳಿದ ಸಿಗುರಿನ ಕಬ್ಬಿನಂದದಿ ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ ಲಲಿತವಹ ಕನ್ನಡದ ನುಡಿಯಲಿ ತಿಳಿದು ತನ್ನೊಳು ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೇ, ಸಂಸ್ಕೃತದಲಿನ್ನೇನು?** – ಮಹಲಿಂಗರಂಗ

# ಕನ್ನಡ ರಾಜ್ಯೋತ್ಸವ ದಿನಾಚರಣೆಯ ವರದಿ

## ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು, (ಮುಖ್ಯ)

**ಶೇಷಾದ್ರಿಪುರಂ, ಬೆಂಗಳೂರು**



ಶೇಷಾದ್ರಿಪುರಂನಲ್ಲಿರುವ ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು (ಮುಖ್ಯ) ಇಲ್ಲಿ 22 ನವೆಂಬರ್ 2016ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ದಾನ ಚಿಂತಾಮಣಿ ಪ್ರಶಸ್ತಿ ಪುರಸ್ಕೃತರು, ಹೋರಾಟಗಾರರೂ ಆದ ಡಾ. ಬಿ.ಟಿ. ಲಲಿತಾ ನಾಯಕ್ ಆಗಮಿಸಿದ್ದರು. ವಿದ್ಯಾರ್ಥಿವೃಂದದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಈ ಸಂದರ್ಭದಲ್ಲಿ ಏರ್ಪಡಿಸಲಾಗಿತ್ತು.

## ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜು

**ಶೇಷಾದ್ರಿಪುರಂ, ಬೆಂಗಳೂರು**



ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜಿನಲ್ಲಿ 61ನೇ ಕನ್ನಡ ರಾಜ್ಯೋತ್ಸವ ಸಮಾರಂಭ ಇತ್ತೀಚಿಗೆ ನಡೆಯಿತು. ಸಮಾರಂಭದಲ್ಲಿ ಹಿರಿಯ ಸಾಹಿತಿ ಡಾ. ಎನ್.ಕೆ. ರಾಮಶೇಷನ್ ಮುಖ್ಯ ಅತಿಥಿಯಾಗಿ ಹಾಜರಿದ್ದು ಮಾತನಾಡಿದರು.

## ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು

**ಮೈಸೂರು**



ಮೈಸೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ 30 ನವೆಂಬರ್ 2016ರಂದು ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಆಚರಿಸಲಾಯಿತು. ಇದರ ಅಂಗವಾಗಿ ಮೈಸೂರು ನಗರದ ಸುತ್ತಮುತ್ತಲಿನ ವಿವಿಧ ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಲಾಯಿತು. ಪ್ರತಿ ಶಾಲಾಕಾಲೇಜಿನಿಂದ ಆಯ್ಕೆಯಾದ ಐದು ವಿದ್ಯಾರ್ಥಿಗಳಿಗೆ ಶೇಷಾದ್ರಿಪುರಂ ಕಾಲೇಜಿನಲ್ಲಿ ಅಂತಿಮ ಸುತ್ತಿನ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿ ಬಹುಮಾನಗಳನ್ನು ವಿತರಿಸಲಾಯಿತು.

ಸಾಹಿತ್ಯ ರತ್ನ ಡಾ. ಮಳಲಿ ವಸಂತಕುಮಾರ್ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಾ ಕನ್ನಡದ ಮೇರು ವ್ಯಕ್ತಿಗಳಾದ ಕುವೆಂಪು, ಶಿವರುದ್ರಪ್ಪ, ಮಾಸ್ತಿ ಮುಂತಾದ ಕವಿಗಳನ್ನು ನೆನಪು ಮಾಡಿಕೊಂಡು ಅವರ ಮಾತುಗಳನ್ನು ಉದ್ಧರಿಸಿ ವಿದ್ಯಾರ್ಥಿಗಳಲ್ಲಿ ನಾಡುನುಡಿಯ ಅಭಿಮಾನವನ್ನು ಹೆಚ್ಚಿಸಿದರು. ಕಾರ್ಯಕ್ರಮದಲ್ಲಿ ಹಾಜರಿದ್ದ ಮತ್ತೊಬ್ಬ ಅತಿಥಿ ಹಾರ್ಡ್ವಿಕ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಹಿರೇಮಠರ ಧರ್ಮರಾಜು ಅವರು ಸಮಾರಂಭವನ್ನು ಉದ್ದೇಶಿಸಿ ಕನ್ನಡದ ಕೆಲಸಕ್ಕೆ ಎಲ್ಲರೂ ಕೈ ಜೋಡಿಸೋಣ ಎಂಬ ಕರೆಯನ್ನು ನೀಡಿದರು.

## ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು

**ಶೇಷಾದ್ರಿಪುರಂ, ಬೆಂಗಳೂರು**



ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ 23 ನವೆಂಬರ್ 2016ರಂದು 'ಕನ್ನಡ ರಾಜ್ಯೋತ್ಸವ'ವನ್ನು ಸಂಭ್ರಮ ಸಡಗರದಿಂದ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಪ್ರಥಮ ಪಿ.ಯು. ವಾರ್ಷಿಕ ಪರೀಕ್ಷೆಯ ಕನ್ನಡ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ' ನೀಡಿ ಅಭಿನಂದಿಸಲಾಯಿತು.

ಮುಖ್ಯ ಅತಿಥಿಗಳಾದ ನಟಿ ರೂಪಿಕಾ ಮಾತನಾಡುತ್ತಾ ಕನ್ನಡ ಭಾಷೆಯನ್ನು ಆಳವಾಗಿ ಅಭ್ಯಾಸ ಮಾಡುವಂತೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಗಾಯಕರು ಹಾಗೂ ಸಂಗೀತ ನಿರ್ದೇಶಕ ರವಿ ಮೂರೂರು ಅವರು ಹಾಜರಿದ್ದರು.

## ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು

**ಕೆಂಗೇರಿ ಉಪನಗರ, ಬೆಂಗಳೂರು**



ಕೆಂಗೇರಿಯಲ್ಲಿರುವ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ 'ಕನ್ನಡ ನುಡಿ ಹಬ್ಬ'ವನ್ನು 5 ನವೆಂಬರ್ 2016ರಂದು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಜಾನಪದ ಪರಿಷತ್ತಿನ ಕಾರ್ಯದರ್ಶಿ ಮುನಿರಾಜು ಕೆ. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

# ಕನ್ನಡವೆನೆ ಕುಣಿದಾಡುವುದೆನ್ನೆದೆ

## 60ರ ಕರ್ನಾಟಕ ರಾಜ್ಯೋತ್ಸವ

ದೇವರಾಜು ಅರಸುರವರು 1973ರ ನವೆಂಬರ್ 1ರಂದು ಮೈಸೂರು ರಾಜ್ಯವನ್ನು ಮರುನಾಮಕರಣ ಮಾಡಿ "ಕರ್ನಾಟಕ" ಎಂದು ಹೆಸರಿಟ್ಟಿದ್ದರ ಫಲವೇ ಕರ್ನಾಟಕ ರಾಜ್ಯೋತ್ಸವ.

ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನರು ಸತ್ತರು. ಟಿಪ್ಪುವಿನ ವಿಶಾಲ ರಾಜ್ಯ ಹರಿದು ಹಂಚಿಹೋಯ್ತು. ವಿಶಾಲ ಮೈಸೂರು ರಾಜ್ಯವನ್ನು ಮರಾಠರು, ನಿಜಾಮರು ಮತ್ತು ಬ್ರಿಟೀಷರು ಭಾಗ ಮಾಡಿಕೊಂಡು ಹಂಚಿಕೊಂಡರು. ಒಂದು ಭಾಗ ಮೈಸೂರು ರಾಜ್ಯವಾಗಿ ಉಳಿದುಕೊಂಡಿತು. ಅದನ್ನು "ಹಳೆಯ ಮೈಸೂರು" ಒಡೆಯರಿಗೆ ಅನೇಕ ಷರತ್ತುಗಳ ಮೇಲೆ ಬಿಟ್ಟುಕೊಟ್ಟರು. ಹಾಗೆಯೇ ಬ್ರಿಟೀಷರು ಮರಾಠರ ನೆರವಿನಿಂದ ಇತರೆ ಸಣ್ಣ ಸಂಸ್ಥಾನಗಳು ಅಸ್ತಿತ್ವಕ್ಕೆ ಬಂದವು.

1947 ಆಗಸ್ಟ್ 15ರಂದು ಭಾರತ ಸ್ವತಂತ್ರ ರಾಷ್ಟ್ರವಾದರೂ, ಕರ್ನಾಟಕದಲ್ಲಿದ್ದ 20 ಆಡಳಿತ ಘಟಕಗಳನ್ನು ಕೂಡಿಸಿ ಐದು ವಿಭಾಗಗಳಾಗಿ ಮಾಡಲಾಯ್ತಾದರೂ ಮೈಸೂರು, ಮದರಾಸು, ಹೈದ್ರಾಬಾದ್, ಮುಂಬಯಿ, ಕೊಡಗು ಇದು 5 ಭಾಗಗಳ ಏಕೀಕರಣದ ಮೊದಲ ಹಂತವಾಗಿ ಮಾರ್ಪಟ್ಟಿತು.

**"ನಮ್ಮ ಕನ್ನಡತಾಯಿ ಹಳಬರ ಹಳಬಳು ಪಳವಾತಿನವಳು ಸರಸತಿ, ಹೊಸಬರ ಹೊಸಬರಿಗೆದೆ ಹಾಲು ಕೊಡುವಳು ಬೆಳೆವೊಲು ಚಿಣ್ಣರ ಸುಮತಿ"** - ಎಸ್.ವಿ. ಪರಮೇಶ್ವರ ಭಟ್ಟ

## ಕನ್ನಡ ರಾಜ್ಯೋತ್ಸವ

# ಕನ್ನಡವೆನೆ ಕುಣಿದಾಡುವುದೆನ್ನೆದೆ

1953ರಲ್ಲಿ "ಫಜಲ್ ಆಲಿ ಸಮಿತಿ"ಯು ಶಿಫಾರಸ್ಸಿನ ಮೇರೆಗೆ ಕೆಲ ಬದಲಾವಣೆಗಳೊಂದಿಗೆ 'ಏಕೀಕೃತ ಕರ್ನಾಟಕ' ರಚನೆಗೆ ಒಪ್ಪಿಗೆ ಸಿಕ್ಕಿತು. 1956ರಲ್ಲಿ "ಏಕೀಕರಣಗೊಂಡ ಮೈಸೂರು ರಾಜ್ಯದಲ್ಲಿ" ಒಟ್ಟು 19 ಜಿಲ್ಲೆಗಳನ್ನು ರಚಿಸಲಾಯ್ತು. ನವೆಂಬರ್ 1, 1973ರಂದು ಕರ್ನಾಟಕವೆಂದು ಮರುನಾಮಕರಣವಾಯ್ತು.

1967ರಲ್ಲಿ "ಮಹಾಜನ್ ಆಯೋಗ ವರದಿ" ಕೇಂದ್ರ ಸರ್ಕಾರಕ್ಕೆ 196 ಪುಟಗಳ ವರದಿ ಸಲ್ಲಿಸಿತು. ಮಹಾರಾಷ್ಟ್ರದ ಬೆಳಗಾವಿ ಬೇಡಿಕೆ ಹೊಸದಾಗಿರುವುದು ಮಾತ್ರವಲ್ಲದೆ ನಗರದ ಮೂರು ಕಡೆ ಕನ್ನಡ ಹಳ್ಳಿಗಳು ಹಂಚಿಕೊಂಡಿವೆ. ಆದ್ದರಿಂದ ಬೆಳಗಾವಿ ಕರ್ನಾಟಕದಲ್ಲಿ ಉಳಿಯುವುದೇ ಸೂಕ್ತ ಎಂದು ಮಹಾಜನ್ ವರದಿ ಅಭಿಪ್ರಾಯಪಟ್ಟಿತು. ಕಾಸರಗೋಡು ಅತಂತ್ರವಾಗಿ ಉಳಿದಿರುವುದು, ಮಹಾರಾಷ್ಟ್ರ, ಕರ್ನಾಟಕ, ಕೇರಳ ಗಡಿ ವಿವಾದ ಇನ್ನೂ ಜ್ವಲಂತ ಸಮಸ್ಯೆಯಾಗಿ ಉಳಿದಿರುವುದೇ 60ರ ಕರ್ನಾಟಕ ರಾಜ್ಯೋತ್ಸವದ ಸವಾಲು ಎನ್ನಬಹುದು.

ಒಟ್ಟಿನಲ್ಲಿ "ಕನ್ನಡ" – "ಕನ್ನಡಿಗ" – "ಕರ್ನಾಟಕ" ತ್ರಿವಳಿಗಳು ಮೂರು ದಿಕ್ಕುಗಳಾಗದೆ ಏಕರೂಪವಾಗಿ, ಉದ್ಯೋಗ–ಭೂಮಿ–ಸೌಕರ್ಯಗಳ ಧಾಮವಾಗುವಲ್ಲಿ, ಮನ ಮನದಲ್ಲಿ, ಮನೆ ಮನೆಯಲ್ಲಿ ಜಾಗೃತಿಯೊಂದಿಗೆ ಪರಿಣಾಮ ಕಾಣಬೇಕಾಗಿದೆ. "ಕನ್ನಡಿಗ ರಾಗ ಬೇಡ ಕನ್ನಡಿಗರಾಗೋಣ" – ಇದಕ್ಕಾಗಿ ಶ್ರಮಿಸೋಣ.



**ಜಯಶ್ರೀ ಎಂ. ಒಡೆಯರ್**
ಜೀವಶಾಸ್ತ್ರ ವಿಭಾಗದ ಮುಖ್ಯಸ್ಥರು
ಶೇಷಾದ್ರಿಪುರಂ ಪದವಿ ಪೂರ್ವಕಾಲೇಜು
ಯಲಹಂಕ, ಬೆಂಗಳೂರು–560 064

## ನನ್ನ ಬಗ್ಗೆ ಒಂದಿಷ್ಟು .......

ನನ್ನ ಬಗ್ಗೆ ಏನೆಂದು ಹೇಳಲಿ . . . . ಹ್ಞಂ ನನ್ನ ಹೆಸರು "ಕರ್ನಾಟಕ" ಎಂದು ಕರೆಯಬಹುದು. ಕರುನಾಡು, ಕನ್ನಡನಾಡು, ಕಮ್ಮಿತ್ತು ನಾಡು, ಕಂಪನುಳ್ಳ ನಾಡು ಹೀಗೆ ಹಲವು ಹೆಸರುಗಳು ಸಹ ನನಗಿದೆ. ನನ್ನ ಆಡು ಭಾಷೆ ಕನ್ನಡ. ಕಾವೇರಿಯ ತಂಪು ದಡದಲ್ಲಿರುವ ಕರ್ಮಭೂಮಿ ನನ್ನ ನೆಲೆ.

ನನ್ನ ಕನ್ನಡ ಭಾಷೆಗೆ ಅದ್ವಿತೀಯ ಶಕ್ತಿ ಇದೆ; ಪರಂಪರೆಯ ಸೆಲೆ ಇದೆ. ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ–ವಾಸ್ತುಶಿಲ್ಪ, ನೃತ್ಯ, ಜನಾಂಗ, ಆಚಾರ–ವಿಚಾರ, ನಡವಳಿಕೆ, ರೀತಿ–ನೀತಿ ಎಲ್ಲವೂ ನನ್ನ ಕನ್ನಡ ಸಂಸ್ಕೃತಿಯಲ್ಲಿ ವೈಭವಯುತವಾಗಿದೆ. ಇಂತಹ ಹಿರಿತನ, ದೊರೆತನ, ಸಿರಿತನವಿರುವ ನನ್ನ ಎದೆಯೊಳಗೆ ನೋವು ಸಾವಿರ.

ಜಾಗತೀಕರಣ ಮತ್ತು ಆಧುನೀಕರಣದ ಬಲೆಯಲ್ಲಿ ಸಿಲುಕಿದ ನನ್ನ ಕನ್ನಡ ಭಾಷೆಯನ್ನು ಉಳಿಸುವುದು, ಬೆಳೆಸುವುದು ನನಗೆ ಸವಾಲಾಗಿದೆ. ನನ್ನ ಭಾಷೆಯನ್ನು ಕೇವಲ ಆಚರಣೆಗಷ್ಟೇ ಸೀಮಿತಗೊಳಿಸದೆ 'ತನು ಕನ್ನಡ; ಮನ ಕನ್ನಡ' ಎಂಬುದರಲ್ಲಿ ನಂಬಿಕೆಯಿಟ್ಟು ಕನ್ನಡ ಕಂದಮ್ಮಗಳು ನನ್ನನ್ನು ಮುನ್ನಡೆಸಬೇಕಿದೆ.

ಕನ್ನಡ – ಕನ್ನಡಿಗ – ಕರ್ನಾಟಕ ಎಂಬ ಅಭಿಮಾನ ನನ್ನ ಕನ್ನಡ ಸಹೋದರ – ಸಹೋದರಿಯರಲ್ಲಿ ಚಿಗುರಬೇಕಾದ ಅಗತ್ಯವಿದೆ . . .

ಓ ನನ್ನ ಕನ್ನಡ ಮನುಸುಗಳೇ. . .
ನೀವು ನನ್ನ ಜೊತೆಗಿದ್ದರೆ ಸೋಲನ್ನು ಗೆಲ್ಲುವೆ ನಾನು
ನೀವು ನನ್ನ ಜೊತೆಗಿದ್ದರೆ ಬದುಕನ್ನು ಸುಲಭವಾಗಿ ಸಾಗಿಸುವೆ ನಾನು
ನಿಮ್ಮ ಕನ್ನಡತನದ ಪ್ರೀತಿಯನ್ನು, ಮೆಚ್ಚುಗೆಯನ್ನು ನಿಮ್ಮವರಿಗೆ ಇಂದೇ ಹೇಳು
ನಿನ್ನ ಮಡಿಲಲ್ಲಿರುವ ಪ್ರೀತಿ, ಸಹನೆ, ಮಮತೆ
ಎಲ್ಲವನ್ನೂ ನನ್ನವರೆಂದು ಬರಸೆಳೆದಪ್ಪಿಕೊಳ್ಳುವ
ನಿನ್ನ ಅಗಾಧ ವಾತ್ಸಲ್ಯವನ್ನು ಸ್ವಲ್ಪ ಅಕ್ಕಪಕ್ಕದವರಿಗೂ ಕೊಟ್ಟು ಬಿಡು. . . . .
ಇಂತಿ ನಿನ್ನ
**ಒಲವ ; ಬಲವ ; ಚೆಲುವ ಕರ್ನಾಟಕ**



**ಡಾ. ಜಿ. ದಿನಕರ್,**
ಕನ್ನಡ ಉಪನ್ಯಾಸಕರು
ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು,
ಶೇಷಾದ್ರಿಪುರಂ, ಬೆಂಗಳೂರು–20.

## ಕನ್ನಡ ರಾಜ್ಯೋತ್ಸವ – ಸಿಂಹಾವಲೋಕನ

**'ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು,
ಕನ್ನಡವೇ ಸತ್ಯ, ಕನ್ನಡವೇ ನಿತ್ಯ',**

ಎಂಬ ಕುವೆಂಪುರವರ ಮಾತಿನಂತೆ ಕನ್ನಡ ರಾಜ್ಯೋತ್ಸವ ಸಮಸ್ತ ಕನ್ನಡಿಗರಿಗೂ ಬಲು ಹರುಷದ ದಿನ, ಹಾಗೂ ಕನ್ನಡಾಂಬೆಯ ಜನುಮದ ದಿನ.

ಕನ್ನಡ ಭಾಷೆ ಸುಮಾರು 2500 ವರ್ಷಗಳಷ್ಟು ಪ್ರಾಚೀನವಾದದ್ದು. ಕನ್ನಡವು 'ವಿಶ್ವದ ಪ್ರಾಚೀನ ಜೀವ ಭಾಷೆ' ಎಂದು 'ಗಿನ್ನಿಸ್' ದಾಖಲೆಯ ಪುಟದಲ್ಲಿ ಸೇರ್ಪಡೆಯಾಗಿದೆ. ಕನ್ನಡವು ಹಿಂದೆ ಕೇವಲ ಆಡುಭಾಷೆಯ ಮೂಲಕ ಪ್ರಾಮುಖ್ಯತೆಯನ್ನು ಪಡೆದಿತ್ತು. ಭಾಷೆಯು ಲಿಖಿತರೂಪ ಕಂಡದ್ದು 3ನೇ ಶತಮಾನದ ಅಶೋಕನ ಶಾಸನದಲ್ಲಿ, 'ಇಸಿಲ' ಎಂಬ ಪದ ಬಳಕೆ ಮಾಡಿರುವುದು, 5ನೇ ಶತಮಾನದ 'ಹಲ್ಮಿಡಿ ಶಾಸನ', 9 ನೇ ಶತಮಾನದಲ್ಲಿನ 'ಕವಿರಾಜಮಾರ್ಗ' ಎಂಬ ಕೃತಿ, ಇವುಗಳಲ್ಲದೇ ಪಂಪ, ರನ್ನ, ಜನ್ನ, ಪೊನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ ಮೊದಲಾದ ಶ್ರೇಷ್ಠ ಕವಿಗಳು ಕನ್ನಡ ಭಾಷೆಯ ಸವಿಯನ್ನು ಹೊರ ಪ್ರಪಂಚಕ್ಕೆ ತಿಳಿಸಿದ್ದಾರೆ.

ದ.ರಾ.ಬೇಂದ್ರೆಯವರು 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂದು ಹೇಳಿದ್ದಾರೆ. ಅಂದರೆ ಕನ್ನಡ ಭಾಷೆಯೊಂದೇ ನಮಗೆ ನಾಡು–ನುಡಿ, ಸಂಸ್ಕೃತಿ ಎಲ್ಲವನ್ನೂ ಕಲಿಸುತ್ತಿದೆ. ಇದಕ್ಕೆ ಪೂರಕವೆಂಬಂತೆ ಕನ್ನಡ ಭಾಷೆಗೆ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಲಭಿಸಿರುವುದು.

ಕರ್ನಾಟಕವು 1956ರಲ್ಲಿ ಏಕೀಕರಣಗೊಂಡು 'ಮೈಸೂರು ರಾಜ್ಯ' ಎಂದು ನಾಮಕರಣಗೊಂಡಿತು. ಆ ಸಮಯದಲ್ಲಿ ಮೈಸೂರು ಅರಸರ ಆಳ್ವಿಕೆಯು ವಿಶ್ವಕ್ಕೆ ಮಾದರಿಯಾಗಿತ್ತು. ಹಲವು ವರ್ಷಗಳ ನಂತರ ಕನ್ನಡದ ಕಂಪು ಎಲ್ಲೆಡೆ ಪಸರಿಸಿ, ನವೆಂಬರ್ 1, 1973 ರಂದು ಮೈಸೂರು ರಾಜ್ಯವು 'ಕರ್ನಾಟಕ' ಎಂದು ಮರು ನಾಮಕರಣಗೊಂಡಿತು. ಕರ್ನಾಟಕಕ್ಕೆ ಇದೀಗ 60 ವರ್ಷಗಳು ತುಂಬಿವೆ. ಕರ್ನಾಟಕವು ತನ್ನ ವಜ್ರ ಮಹೋತ್ಸವವನ್ನು ಆಚರಿಸುತ್ತಿದೆ. ಮೈಸೂರು ಅರಸರ ಆಳ್ವಿಕೆಯಲ್ಲಿಯೇ ಕನ್ನಡದ ಏಳಿಗೆಗಾಗಿ, ಬೆಳವಣಿಗೆಗಾಗಿ, ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿಸಲ್ಪಟ್ಟಿತ್ತು. ಈ ಪರಿಷತ್ತು ರಾಜ್ಯದಾದ್ಯಂತ ಸಾಹಿತ್ಯ ಸಮ್ಮೇಳನಗಳನ್ನು ಆಚರಿಸುವ ಮೂಲಕ ನಮ್ಮ ನಾಡು–ನುಡಿಗಳ ಬಗ್ಗೆ ಇರುವ ಅಲಕ್ಷ್ಯತನವನ್ನು ಹೋಗಲಾಡಿಸುವಲ್ಲಿ ಯಶಸ್ಸಿನ ಮೆಟ್ಟಿಲನ್ನು ಏರಿದೆ.

ನಮ್ಮ ಕನ್ನಡಭಾಷೆಗೆ ಎಲ್ಲರ ಹೃದಯವನ್ನು ಗೆಲ್ಲುವ ಶ್ರೀಮಂತಿಕೆಯಿದೆ. ದೈವತ್ವ ಹಾಗೂ ಸಾತ್ವಿಕತೆಯನ್ನು ಹೊಂದಿರುವಂತಹ ನಮ್ಮ ಕನ್ನಡ ಭಾಷೆಯ 'ಹಚ್ಚೇವು ಕನ್ನಡದ ದೀಪ, ಕರುನಾಡ ದೀಪ'ಎನ್ನುತ್ತಾ ಕರುನಾಡ ದೀಪವನ್ನು ವಿಶ್ವದ ಎಲ್ಲರ ಮನದಲ್ಲೂ ಬೆಳಗುವಂತೆ ಮಾಡೋಣ ಎಂಬ ಸಂಕಲ್ಪದ ದೀಕ್ಷೆಯನ್ನು ತೊಟ್ಟಾಗ 'ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ' ಎನ್ನುವುದು ಸಾಧ್ಯವಾಗುತ್ತದೆ.

**ಶ್ರೀವತ್ಸ ಜಿ.ಎನ್.**
ದ್ವಿತೀಯ ಪದವಿ ಪೂರ್ವ ವಿದ್ಯಾರ್ಥಿ, 2 'ಎ' ವಿಭಾಗ,
ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು,
ಶೇಷಾದ್ರಿಪುರಂ, ಬೆಂಗಳೂರು–20.

## ಕನ್ನಡ ರಾಜ್ಯೋತ್ಸವ

ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಕರ್ನಾಟಕದ ಪ್ರತಿಯೊಬ್ಬ ಕನ್ನಡಿಗನು ನಾಡು–ನುಡಿಯ ಚಿರಂತನ ಪರಂಪರೆಯನ್ನು ಸ್ಮರಿಸಿಕೊಳ್ಳುವ ಮೂಲಕ ಆತ್ಮಾಭಿಮಾನ ಹಾಗೂ ಆತ್ಮಾವಲೋಕನಕ್ಕೆ ಮುಂದಾಗಬೇಕು.

ಕನ್ನಡಕ್ಕೆ ಸುಮಾರು 2500 ವರ್ಷಗಳ ಇತಿಹಾಸವಿದೆ. ಆಧುನಿಕ ಕರ್ನಾಟಕದ ರೂಪುರೇಷೆಗಳು ಗೋಚರವಾಗತೊಡಗಿದ್ದು ಮೈಸೂರು ಅರಸರ ಆಳ್ವಿಕೆಯಲ್ಲಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ದಿವಾನರುಗಳಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಇವರುಗಳಿಂದ ಹಲವು ಸರ್ಕಾರಿ ಉದ್ದಿಮೆಗಳು ಸ್ಥಾಪನೆಗೊಂಡವು. 'ಕನ್ನಂಬಾಡಿ ಅಣೆಕಟ್ಟು' ನಿರ್ಮಾಣವಾಯಿತು, 'ಮೈಸೂರು ವಿಶ್ವವಿದ್ಯಾಲಯ' ಹಾಗೂ 'ಕನ್ನಡ ಸಾಹಿತ್ಯ ಪರಿಷತ್ತು' ಆರಂಭಗೊಂಡವು. ಕನ್ನಡಿಗರ ಶ್ರೇಯೋಭಿವೃದ್ಧಿಯ ಈ ಕಾರ್ಯಗಳು ನಾಡಾಭಿಮಾನಕ್ಕೆ ಪೂರಕವಾದವು.

1947ರಲ್ಲಿ ಭಾರತವು ಸ್ವಾತಂತ್ರ್ಯ ಪಡೆದಾಗ ಕರ್ನಾಟಕವು ಮದ್ರಾಸ್, ಮುಂಬೈ, ಕೊಡಗು, ಹೈದರಾಬಾದ್ ಹಾಗೂ ಮೈಸೂರು ಸಂಸ್ಥಾನಗಳಾಗಿ ಐದು ಆಡಳಿತ ಕೇಂದ್ರಗಳಿಗೆ ಒಳಪಟ್ಟಿತು. ಅಸಂಖ್ಯ ಸ್ವಾಭಿಮಾನಿ ಕನ್ನಡಿಗರ ಹೋರಾಟದ ಪ್ರತಿಫಲವಾಗಿ ನವೆಂಬರ್ 1, 1956ರಂದು ಕರ್ನಾಟಕ 'ಮೈಸೂರು ರಾಜ್ಯ'ವಾಗಿ ರೂಪುಗೊಂಡಿತು. ಅನಂತರ 1973ರಲ್ಲಿ 'ಕರ್ನಾಟಕ' ಎಂದು ಪುನರ್ ನಾಮಕರಣವಾಯಿತು.

ಕರ್ನಾಟಕ ಏಕೀಕರಣಗೊಂಡು ಸುದೀರ್ಘ 60 ವರ್ಷಗಳು ಪೂರೈಸಿರುವ ಈ ಸಂದರ್ಭದಲ್ಲಿ ಪ್ರತಿಯೊಬ್ಬ ಕನ್ನಡಿಗನಿಗೆ, ನಾಡಿಗಾಗಿ ಶ್ರಮಿಸಿದ ಮಹನೀಯರನ್ನು ಸ್ಮರಿಸುವ ಔದಾರ್ಯ, ನಾಡು–ನುಡಿ, ನೆಲ–ಜಲಕ್ಕಾಗಿ ತಮ್ಮನ್ನು ಸಮರ್ಪಿಸಿಕೊಳ್ಳುವ ಇಚ್ಛಾಶಕ್ತಿ ಇರಲಿ, ಇನ್ನಷ್ಟು ಬರಲಿ.



**ನಳಿನಿ ಎನ್.**
ಕನ್ನಡ ಉಪನ್ಯಾಸಕಿ,
ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು,
ಶೇಷಾದ್ರಿಪುರಂ, ಬೆಂಗಳೂರು–20.

**"ಕನ್ನಡದ ಸನ್ಮಾನ ಎನಗದುವೆ ವರಮಾನ/ಕನ್ನಡಿಗರ ಸ್ವತಂತ್ರವದೆ ಪರಮಮಂತ್ರ/ಕನ್ನಡದ ಕೀರ್ತಿಯೆನ್ನ ಚಿತ್ತದ ಸ್ಫೂರ್ತಿ/ಕನ್ನಡದ ಒಗ್ಗೂಟ ಎನಗದೆ ಕಿರೀಟ"** - ಬೆನಗಲ್ ರಾಮರಾವ್

# ಮಕ್ಕಳ ದಿನಾಚರಣೆ

happy children's day



**Subhash N., 9-A**
SHS, Yelahanka



**Anuj Baladhanvi J.**



**Bharath H.D.**
8-B, SHS,
Yelahanka

## ಮನುಜ

ಹುಟ್ಟಿತು ಗಂಡು ಮಗು
ಸಂಸಾರದೆಲ್ಲೆಡೆ ನಗು
ಆ ಮಗು ಎಲ್ಲರಿಗೂ ಮುದ್ದು
ಚಂದ ಆತನ ಗೆಜ್ಜೆ ಸದ್ದು

ಅವನಿಗೆ ಹಲ್ಲುಗಳು ಬಂತು
ಮಗು ಹಣ್ಣುಕಾಯಿ ತಿಂತು
ಚಿಗುರಿತು ಮುಖದಲ್ಲಿ ಮೀಸೆ
ಬಂತು ಕೆಟ್ಟಭ್ಯಾಸದ ಮೇಲೆ ಆಸೆ

ಮಾಡಿದ ಧೂಮ ಮಧ್ಯಪಾನ
ಆದ ರಾತ್ರಿಯ ಬೀದಿ ಶ್ವಾನ
ನಂತರ ಮೋಜಿಗೆ ಗಾಂಜ
ಆಗಿದ ಅದಕ್ಕೆ ತನುಜ

ಮಗನಿಗೆ ಕೇಳಲಿಲ್ಲ ತಾಯಿಯ ಕೂಗು
ಅವನಾದ ಸಮಾಜದಲ್ಲಿ ಕಪ್ಪು ರಂಗು
ಸ್ಥಿಮಿತದಲ್ಲಿರಲಿ ಅವನ ಮನಸ್ಸು
ಅಷ್ಟರಲ್ಲಿ ತಾಯಿಗಾಯಿತು ವಯಸ್ಸು

ತಾಯಿಗೆ ಮೈಯೆಲ್ಲ ರೋಗ
ಮಗನಿಗೆ ಯಾರು ಕೊಡಲಿಲ್ಲ ಉದ್ಯೋಗ
ಅಲ್ಲಿ ಕಳೆದುಕೊಂಡ ಗೌರವ
ಇಲ್ಲಿ ತಾಯಿಯ ಶವ



**ಅಭಯ ಕೆ. ಭಾರದ್ವಾಜ್**
10–ಬಿ, ಶೇಷಾದ್ರಿಪುರಂ ಪ್ರೌಢಶಾಲೆ,
ಶೇಷಾದ್ರಿಪುರಂ



**Shsivakumar, 10-A**
SHS



**Sinchana N., 8-C**
SHS, Yelahanka





**M. Kushi Yadav**
8-A, SHS, Yelahanka




**Sahana S. Shetty, 9-B**
SHS, Yelahanka

## ಭೂಮಿತಾಯಿಯ ಬಯಕೆ

ಭೂಮಿತಾಯಿಯ ಮಕ್ಕಳು ನಾವು
ಆದರೆ ತಾಯಿಯ ಪಾಲಿಗೆ ವಿಷದ ಹಾವು
ಗಿಡಮರಗಳನ್ನು ಕತ್ತರಿಸುತ ಕೊಡುವೆವು ತಾಯಿಗೆ ಕಾವು
ಕಾವು ಕೊಟ್ಟರು ತಾಯಿ ನೀಡುವಳು ನಮಗೆ ಸಿಹಿಯಾದ ಮಾವು
ಎಲ್ಲರೂ ಬದುಕಲು ತಾವು
ಗಿಡಮರಗಳನ್ನು ಬೆಳೆಸೋಣ ನಾವು
ಇದೆ ಆ ತಾಯಿ ಬಯಸುವ ಸುವರ್ಣದ ಹೂವು.

**ಅಭಯ ಕೆ. ಭಾರದ್ವಾಜ್**
10–ಬಿ, ಶೇಷಾದ್ರಿಪುರಂ ಪ್ರೌಢಶಾಲೆ,
ಶೇಷಾದ್ರಿಪುರಂ



**Syed Touheed, 8-A**
SHS, B'lore



**S. Harshitha, 8-C**
SHS, Yelahanka



**Smitha S. Joshi**
8-B, SHS,
Yelahanka



**Ananya B.R., 8-A**
SHS, Yelahanka



**Jithesh R.D., 9-D**
SHS, Yelahanka

